**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿಸಿ ನಂಬರಃ 663/2019**

ಸಿ ಡಬ್ಲ್ಯೂ –5

ಪಿ ಡಬ್ಲ್ಯೂ–4

| | | |
|---|---|---|
| **ಸಾಕ್ಷಿದಾರರ ಹೆಸರು** | : | ಗಣೇಶ |
| **ತಂದೆ/ಗಂಡನ ಹೆಸರು** | : | ಹನುಮಂತಪ್ಪ ಚಕ್ರಸಾಲಿ |
| **ವಯಸ್ಸು** | : | 35 ವರ್ಷ |
| **ಉದ್ಯೋಗ** | : | ಶಿಕ್ಷಕ, ಕಾಕೋಳ |
| **ವಾಸ** | : | ನೂಕಾಪುರ |

**ದಿನಾಂಕಃ 27–06–2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ನಾನು ಸುಮಾರು 8 ವರ್ಷಗಳಿಂದ ಕಾಕೋಳ ಗ್ರಾಮದಲ್ಲಿರುವ ಶ್ರೀವಿವೇಕಾನಂದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಮೊದಲು ಮುಖ್ಯೋಪಾಧ್ಯಯನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನು. ನಮ್ಮ ಶಾಲೆಯಲ್ಲಿ ಒಟ್ಟು 8 ಕೊಠಡಿಗಳು ಇವೆ. 1 ಮತ್ತು 5 ನೇ ಕೊಠಡಿಯಲ್ಲಿ 3 ಕಂಪ್ಯೂಟರ್ ಗಳನ್ನು ಅಳವಡಿಸಲಾಯಿತು. ಅದಕ್ಕೆ ಸಿಪಿಯು, ಮಾನಿಟರ್, ಡೆಕ್ ಸ್ಟಾಪ್ ನ್ನು ಅಳವಡಿಸಿತ್ತು. ದಿನಾಂಕ 27–10–2018 ರಲ್ಲಿ ಶನಿವಾರ ಇದ್ದು ಶಾಲೆಯು ಬೆಳಿಗ್ಗೆ 08.00 ಗಂಟೆಯಿಂದ 11.00 ಗಂಟೆಯವರೆಗೆ ಶಾಲೆ ಮುಗಿದ ನಂತರ ಚಾಸಾ–4 ನೀಲಮ್ಮ(ಆಯಾ) ರವರು ಎಲ್ಲಾ ಕೊಠಡಿಗಳಿಗೆ ಬೀಗ ಹಾಕಿಕೊಂಡು ಅವರು ಹೋಗಿದ್ದರು. ಮರು ದಿವಸ ಬಾನುವಾರ ಇದ್ದು ಶಾಲೆಗೆ ರಜಾ ಇದ್ದ ಕಾರಣ ಶಾಲೆಯ ಕಾರ್ಯದರ್ಶಿ ಹನುಮಂತಪ್ಪ ಚಾಸಾ–1 ರವರು ಬೋರ್ ರಿಪೇರಿ ಮಾಡಿಸಲು ಸಂಜೆ 07.00 ಗಂಟೆಗೆ ಹೋಗಿ ಬೋರ್ ರಿಪೇರಿ ಮಾಡಿಸಿ ಶಾಲೆಯ ಎಲ್ಲಾ ಕೊಠಡಿಗಳನ್ನು ಬೀಗ ಹಾಕಿರುವುದನ್ನು ನೋಡಿಕೊಂಡು ಬಂದಿರುತ್ತಾರೆ. ಮರು ದಿವಸ ದಿನಾಂಕ 29–10 –2018 ರಂದು ಚಾಸಾ–4 ನೀಲಮ್ಮ ರವರು ಶಾಲೆಗೆ ಹೋಗಿ ನೋಡಿದಾಗ 1 ಮತ್ತು 5 ನೇ ಕೊಠಡಿಯ ಬೀಗಗಳು ತೆಗೆದು ಬಾಗಿಲು ಓಪನ್ ಆಗಿದ್ದು ಕಂಪ್ಯೂಟರ್, ಕೀಬೋರ್ಡ, ಸಿಪಿಯು, ಮಾನಿಟರ್, ಡೆಕ್ ಸ್ಟಾಪ್ ಗಳು ಎಲ್ಲಾ ಕಳುವು ಆಗಿದ್ದು ಈ ವಿಚಾರವನ್ನು ಚಾಸಾ–4 ರವರಿಗೆ ತಿಳಿಸಿದ್ದು ಚಾಸಾ–4 ರವರು ನನಗೆ ದೂರವಾಣಿ

ಸಿ ಡಬ್ಲ್ಯೂ -5

ಪಿ ಡಬ್ಲ್ಯೂ-4

ಮುಖಾಂತರ ತಿಳಿಸಿರುತ್ತಾರೆ. ನಂತರ ತಕ್ಷಣ ನಾವು ಶಾಲೆಗೆ ಹೋಗಿ ನೋಡಿದಾಗ ಶಾಲಾ ಕೊಠಡಿ 1 ಮತ್ತು 5 ರಲ್ಲಿ ಹಾಕಿಲಾಗಿದ್ದ ಕಂಪ್ಯೂಟರ್, ಕೀಬೋರ್ಡ, ಸಿಪಿಯು, ಮಾನಿಟರ್, ಡೆಕ್ ಸ್ಟಾಪ್ ಗಳು ಇರಲಿಲ್ಲ. ನಂತರ ಶಾಲೆಯ ಕಾರ್ಯದರ್ಶಿ ಚಾಸಾ-1 ರವರು ಪೋಲಿಸರಿಗೆ ವಿಚಾರವಾಗಿ ತಿಳಿಸಿ ದೂರನ್ನು ಕೊಟ್ಟಿರುತ್ತಾರೆ. ಚಾಸಾ-1 ರವರು ದೂರು ಕೊಟ್ಟ 3 ತಿಂಗಳ ನಂತರ ಪೋಲಿಸರು 3 ಜನರನ್ನು ಶಾಲೆಯ ಬಳಿ ಕರೆದುಕೊಂಡು ಬಂದು ನಮಗೆ ತೋರಿಸಿದರು. ಆಗ ಆರೋಪಿತರು ಕೊಠಡಿ 1 ಮತ್ತು 5 ರಲ್ಲಿ ಕಂಪ್ಯೂಟರ್, ಕೀಬೋರ್ಡ, ಸಿಪಿಯು, ಮಾನಿಟರ್, ಡೆಕ್ ಸ್ಟಾಪ್ ಗಳು ಕಳುವು ಮಾಡಿರುವುದಾಗಿ ತಿಳಿಸಿದರು. ಅವರ ಹೆಸರನ್ನು ಪಕ್ಕೀರೇಶ, ಮಹೇಶ, ನಾಗರಾಜ ಎಂದು ತಿಳಿಸಿದರು. ನಾನು ಪೋಲಿಸರಿಗೆ ಈ ಕೇಸಿನ ವಿಚಾರವಾಗಿ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲು : ಆರೋಪಿತರ ಪರ ಶ್ರೀ ವಿ.ಸಿ.ಕೆ ವಕೀಲರಿಂದಃ**

ನಾನು ದಿನಾಂಕ 27-10-2018 ರಂದು ಶಾಲೆ ಮುಗಿಸಿಕೊಂಡು ಗುಡ್ಡದ ಹೊಸಳ್ಳಿಗೆ ಹೋಗಿರುತ್ತೇನೆ. ನಾನು ದಿನಾಂಕ 29-10-2018 ರಂದು ವಿಚಾರ ತಿಳಿದ ನಂತರ ಶಾಲೆಗೆ ಬಂದಿರುತ್ತೇನೆ. ಆರೋಪಿಗಳನ್ನು ಪೋಲಿಸರು ನಮ್ಮ ಶಾಲೆಯ ಹತ್ತಿರ ಕರೆದುಕೊಂಡು ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

ಸಹಿ/-

(ಬಿ.ಸಿದ್ದರಾಜು)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.